O.S. NO. 162/2021
PW - 1.
Dated: 27-06-2024.

ಸಾಕ್ಷಿಯನ್ನು ಕರೆಯಿಸಿ ಶಪತವನ್ನು ಬೋಧಿಸಿದೆ.

ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಎಸ್ ಎಸ್ ಎ ವಕೀಲರಿಂದ

ನಾನು ಪಿ ಯು ಸಿ 2 ನೇ ವರ್ಷದ ವರೆಗೆ ಓದಿರುತ್ತೇನೆ. ನಾನು ನನ್ನ ಸ್ವಂತ ಟ್ಯಾಕ್ಸಿ ಓಡಿಸುತ್ತೇನೆ. ವಾದಿ ಸುನಂದಾ ನನ್ನ ಅಕ್ಕ. ವಾದಿ ಬೆಳಗಾವಿಯಲ್ಲಿ ನನ್ನ ಹತ್ತಿರ ಇರುತ್ತಾರೆ. ವಾದಿಗೆ ಈಗ ವಯಸ್ಸು 52 ವರ್ಷ. ಅವರಿಗೆ ಆರೋಗ್ಯ ಚೆನ್ನಾಗಿ ಇದ್ದು ಓಡಾಡಲು ಯಾವುದೇ ತೊಂದರೆ ಇರುವದಿಲ್ಲ ಎಂದರೆ ಸಾಕ್ಷಿ ಹೈ ಬಿಪಿ ಇರುತ್ತದೆ ಎಂದು ನುಡಿದಿರುತ್ತಾರೆ. ವಾದಿಗೆ ವಯೊಸಹಜದಿಂದ ಹೈ ಬಿಪಿ, ತಲೆ ಬೇಣೆ ಆಗುವುದು ಇರುತ್ತದೆ. ಈ ಕುರಿತು ವೈದ್ಯಕೀಯ ದಾಖಲೆ ಹಾಜರುಮಾಡಿದ್ದೀರಾ ಎಂದರೆ ಸಾಕ್ಷಿ ಕೊರ್ಟ ಕೇಳಿದರೆ ಹಾಜರು ಮಾಡುತ್ತೇನೆ ಅಂತಾ ನುಡಿದಿರುತ್ತಾರೆ. ನಾನು ಹೇಳುವಂತೆ ವಾದಿಗೆ ಯಾವುದೇ ಕಾಯಿಲೆ ಇರುವುದಿಲ್ಲ ಎಂದರೆ ಸರಿಯಲ್ಲ . ಹೈ ಬಿಪಿ ಮತ್ತು ತಲೆ ನೊವು ಕಾಯಿಲೆ ಔಷದಿಗಳಿಂದ ಗುಣಮುಖವಾಗುವ ಕಾಂಎಲೆ ಆಗಿದ್ದು ಹೀಗಾಗಿ ವಾದಿಗೆ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ . ನಾನು ಹೇಳುವಂತೆ ವಾದಿ ನನಗೆ ಯಾವುದೇ ಎಸ್ ಪಿ ಎ ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅವಳಿಗೆ ಗೊತ್ತಿಲ್ಲದೇ ನಾನೇ ನಿಪಿ - 23 ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ

O.S. NO. 162/2021

PW - 1.

Dated: 27-06-2024.

ಸರಿಯಲ್ಲ . ವಾದಿಗೆ ದಾವೆ ಮಾಡುವ ಅಥವಾ ನ್ಯಾಯಾಲಕ್ಕೆ ಬಂದು ಸಾಕ್ಷಿ ನುಡಿಯುವ ಇಚ್ಚೆ ಇರುವುದಿಲ್ಲ,ನಾನೇ ದಾಖಲೆ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯನ್ನು ನ್ಯಾಯಾಲಯ ಮುಂದೆ ಹಾಜರುಪಡಿಸಿದರೇ ನಿಜ ಸಂಗತಿ ಹೊರಗೆ ಬರುತ್ತದೆ ಅಂತಾ ಅವಳನ್ನು ನಾನು ನ್ಯಾಯಾಲಯಕ್ಕೆ ಬರದಂತೆ ತಡೆದು ಸುಳ್ಳು ದಾಖಲೆ ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲು ವಕಿಲರ ಕೊರಿಕೆ ಮೇರೆಗೆ ಮುಂದೂಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.